ಫಾರೆಸ್ಟ್ ಇಲಾಖೆ.

ತಾರೀಖು 29ನೇ ಮೇ ಸ್ ೧೮೮೯ನೇ ಇಸವಿ.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು ಬೀಬೀನೆಗಳು ಕೆಳಗೆ ಕಾಣಿಸಿರುವ ತಾರೀಖು ವ ಸ್ಥಳಗಳಲ್ಲಿ ಪಬ್ಲಿಕ್ ಹರಾಜ್ ಮೂಲ್ಕ ವಿಕ್ರಯಸಲ್ಪಡುವದು.

ನಂಬರ್.	ಡಿಪೋ ಹೆಸರು.	ಜಾತಿವಾರ್ ತಪಸೀಲ್.	ಆದದು.	ಹರಾಜ್ ತಾರೀಖು.	ಷರಾ.
1	ಕಣಬೂರು ..	ಸಾಗವಾನೀ ತುಂಡುಗಳು	50		
		ಜಂಗಲ್ ತುಂಡುಗಳು	400	1ನೇ ಜುಲೈ 1889	
2	ಶಿವಮೊಗ್ಗಾ ..	ಸಾಗವಾನೀ ನಾಟಾಗಳು	60		
		ಜಂಗಲ್‌ನಾಟಾ ಮತ್ತು ತುಂಡುಗಳು	150	5ನೇ ಡಿಟೋ	
		ಸಾಗವಾನೀ ಪಲಗುಗಳು	200		
3	ಆಯನೂರು ..	ಜಂಗಲ್ ನಾಟಾಗಳು	250	9ನೇ ಡಿಟೋ	

ಹರಾಜ್ ಷರತ್ತುಗಳು—1887ನೇ ಇಸವಿ ಸೆಪ್ಟಂಬರು 3ನೇ ನಂಬ್ರದಂ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಏ. ಕೃಷ್ಣಸ್ವಾಮಯ್ಯಂಗಾರ್,
ಫಾರ್, ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

1882ನೇ ಇಸವಿ 14ನೇ ನಂಬರ್ ಆಕ್ಟ್ ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಪ್ರಕರಣದ ಮೇರಿಗೆ.

ಬೆಂಗಳೂರು ಸಬ್ ಜಡ್ಜ್ ಕೋರ್ಟಿನಲ್ಲಿ.

ಸ್ ೧೮೮೯ನೇ ಇಸವಿ ಸಿವಿಲ್ ಸೂಟ್ ನಂಬರ್ 1005.

ವಾದಿಗಳು.	ಪ್ರತಿವಾದಿಗಳು.
1. ತುಮಕೂರಲ್ಲಿರುವ ಮಹಮ್ಮದ್‌ಮಸ್ತಾನಾಬಿ ಮುತ್ತುವಲ್ಲಿ	1. ಬುರ್ಹಾನಾಬಿ.
2. ಮಹಮ್ಮದ್ ಅಕ್ಕಬರ್‌ಸಾಬ್	2. ಸೈದಾವೂದ್ ಸಾಬ್
3. ಅಬ್ದುಲ್‌ಕರೀಂಸಾಬ್	3. ಖಸಾಯಿಬುರ್ಹಾನ್‌ಸಾಬ್
4. ಮಹಮ್ಮದ್ ಅಲ್ಲಿಸಾಬ್	4. ಹಯಾತ್‌ಮಿಯ್ಯ
	5. ಜಯವಿಲ್ಲಾಖಾ ವಾಸ ತುಮಕೂರ

ಇದರಿಂದ ತುಮಕೂರು ಕಸಬು ಸ್ಥಳದ ಗಿಮುಸಲ್‌ಮರ್ಜಿಜನಗಳಿಗೆ ತಿಳಿಯಪಡಿಸುವದೇನಂದರೆ, ಮೇಲ್‌ಕಂಡ ವಾದಿಗಳು ಪ್ರತಿವಾದಿಗಳ ಮೇಲೆ ಕಸಬು ತುಮಕೂರ ಹೊರಪೇಟೆಲಿರುವ ಮಸ್‌ಜಿದ್ ಮ್ಯಾನೇಜ್‌ಮೆಂಟ್ ಬಗ್ಗೂ ವೇಷ್‌ಯಿಮೊಮ್ ಕೆಲಸದ ಮೊಕರೂರಾತಿವಿಷಯವಾಗಿಯೂ ಈ ಕೋರ್ಟಿನಲ್ಲಿ ತಂದು ಯಿರುವ ದಾವಾ ಈ ಕೋರ್ಟಿನಲ್ಲಿ 1889ನೇ ಇಸವಿ ಆಗಸ್ಟು 12ನೇ ತಾರೀಖು ದಿವಿ 11 ಘಂಟೆಗೆ ವಿಚಾರಣೆ ಬಗ್ಯೆ ಮೊಕರೂರಾಗಿರುವದ್ದರಿಂದ ಈ ಕೆಸಿನಿಗೆ ವಾದಿಯಾಗಿ ಯಾಗಲಿ ಪ್ರತಿವಾದಿಯಾಗಿಯಾಗಲಿ ಕೀರತಕ್ಕ ಜನಗಳು ಈ ಕೋರ್ಟಿನ ರೂಬರೂ ಆ ವೇಳಿಗೆ ಹಾಜರಾಗತಕ್ಕದ್ದಿಧೆ.

ಏತಾರೀಖು 14ನೇ ಮಾಹೆ ಜೂ ೧೮೮೯ನೇ ಇಸವಿ.

ಯಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫಿಸಿನಿಂದ.

ತಾರೀಖು 14ನೇ ಜೂ ೧೮೮೯.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈಚಿಗೆ ಈ ಡಿಸ್ಟ್ರಿಕ್ಟಿನಲ್ಲಿ ವಿಧವಿಧವಾದ ಹೆಸರುಗಳಿಂದ ಅನೇಕ ಕಂಪೆನಿಗಳು ಏರ್ಪಟ್ಟಿರುವದಲ್ಲದೆ ದಿನವಹಿ ಹೊಸಕಂಪನಿಗಳು ಜೇರ್ಪಡುತ್ತಲಿವೆ, ಈ ಕಂಪನಿಯವರು ಷೇರ್ ಹೊಲ್ಡರ್‌ಗಳಿಗೆ ನಾನಾಬೋಧನೆಗಳಿಂದ ಹೆಚ್ಚಾದ ಸಹಾಯವನ್ನು ಕೊಡುವದಾಗಿ ಆಕಿಯನ್ನು ಪುಂಟುಮಾಡಿ ತದ್ವಾರ ಭಾರಿಯಾಗಿ ದ್ರವ್ಯ ಸಂಪಾದನೆ ಮಾಡುತ್ತಿರುವದಾಗಿ ತಿಳಿಯಬರುತ್ತೆ.

ಈ ಕಂಪೆನಿಗಳು ತಮ್ಮ ತಮ್ಮ ಪ್ರಸಿದ್ಧಪತ್ರಿಕೆಯಲ್ಲಿ ನಮೂದಿಸಿ ಯಿರುವ ಲಿಖ್ಖಾಚಾರಗಳು ಬರಿ ಪೊಜಿ ವೈಳಿದ್ದಾಗಿಯೂ ಜನಗಳಿಗೆ ಆಕಿ ಪುಂಟಾಗಲು ಮಾಯೆತೋರಿಸತಕ್ಕದ್ದಾಗಿಯೂ ಯಿವೆ.